**O.S. 473-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 02.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 4 ನೇ ಪರ ಶ್ರೀ G V M, ವಕೀಲರಿಂದಃ**

5. ನನಗೆ ಮುಖ್ಯ ವಿಚಾರಣೆಯ ವಿಷಯಗಳ ಬಗ್ಗೆ ಮಾಹಿತಿ ಇದೆ. ಅದನ್ನು ಕನ್ನಡ ಭಾಷೆಯಲ್ಲಿ ಬರೆಯಲಾಗಿದೆ. ನಾನು ಪಿತ್ರಾರ್ಜಿತ ಆಸ್ತಿ ಅಂತಾ ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ನನ್ನ ಮಗ ಪೋತಿ ಬಸಪ್ಪ ರವರ ಹೆಸರಿನಲ್ಲಿ 2007-08 ರಲ್ಲಿ ಹಕ್ಕು ಬಿಟ್ಟ ಪತ್ರ ಆಗಿದೆ ಅಂದರೆ ಗೊತ್ತಿಲ್ಲ. 411/2007/08 ಡ-ಉತಾರ ಆಗಿದೆ ಅಂದರೆ ಸರಿಯಲ್ಲ. ಆ ಕಾಲಕ್ಕೆ ಹಣ ಕೊಟ್ಟಿದ್ದಾರೆ ಅಂದರೆ ಸರಿ. ನಾನು ನನ್ನ ಮಗ ಜೀವಂತವಿದ್ದಾಗ 2007-08 ರಿಂದ ಯಾವುದೇ ಕೇಸ ಹಾಕಿಲ್ಲ ಅಂದರೆ ಸರಿ. ನನ್ನ ಮಗ ಮರಣ ಹೊಂದಿ ಒಂದು ವರ್ಷದ ಒಳಗಡೆಗೆ ಸ.ನಂಃ 442/1 ನ್ನು ಮಾರಾಟ ಮಾಡಿದ್ದಾರೆ. ನನ್ನ ಮಗಳು ಶಿವಕ್ಕವ್ವ ಸಹ 2007-08 ರಿಂದ ಯಾವುದೇ ಕೇಸ ಹಾಕಿಲ್ಲ. ನನ್ನ ಮಗ ಮರಣ ಹೊಂದಿದನಂತರ ಸೊಸೆ ಹಾಗೂ ಮೊಮ್ಮಕ್ಕಳಿಗೆ ತೊಂದರೆ ಕೊಡಲು ನಾನು ಹಾಗೂ ನನ್ನ ಮಗಳು ಸುಳ್ಳು ಕೇಸ ಹಾಕಿದ್ದೇವೆ ಅಂದರೆ ಸರಿಯಲ್ಲ. ಹಣ ಪಡೆದುಕೊಂಡು ಹಕ್ಕು ಬಿಟ್ಟುಕೊಟ್ಟಿದ್ದರೂ ಸುಳ್ಳು ಕೇಸ ಹಾಕಿದ್ದೇವೆ ಅಂದರೆ ಸರಿಯಲ್ಲ. ವಾರಸಾ ಹಚ್ಚಿಕೊಂಡಿದ್ದು ಗೊತ್ತಿಲ್ಲ. ದಾವಾ ಆಸ್ತಿಗಳು ನನ್ನ ಮಗನ ಸ್ವಂತ ಆಸ್ತಿಯಾಗಿದ್ದರಿಂದ ನನಗೆ ಹಾಗೂ ನನ್ನ ಮಗಳಿಗೆ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 5 ನೇ ಪರ ಶ್ರೀ ಜಿ ಎನ್ ಬಿ, ವಕೀಲರಿಂದಃ**

6. ಐದನೇ ಪ್ರತಿವಾದಿ ನನ್ನ ಮಗಳು. ಕ್ರಮಸಂಖ್ಯೆ 3 ಹಾಗೂ 4 ಮನೆಗಳು ನನ್ನ ಗಂಡನ ಹೆಸರಿನಲ್ಲಿವೆ ಅಂದರೆ ಸರಿ. ಮನೆಗೆ ಸಂಬಂಧಪಟ್ಟಂತೆ ಯಾವುದೇ ವಾಟ್ನಿಯಾಗಿಲ್ಲ. ಕ್ರಮಸಂಖ್ಯೆ 3 ಹಾಗೂ 4 ರಲ್ಲಿ ಮಗಳಿಗೆ ಪಾಲು ಇದೆ ಅಂದರೆ ಸರಿ. ಕ್ರಮಸಂಖ್ಯೆ 1 ಹಾಗೂ 2 ಕ್ಕೆ ಸಂಬಂಧಪಟ್ಟಂತೆ ಮೋಸ ಮಾಡಿ 5 ನೇ ಪ್ರತಿವಾದಿ ಸಹಿ ಪಡೆದುಕೊಂಡಿದ್ದೇವೆ ಅಂದರೆ ಸರಿಯಲ್ಲ.

**O.S. 473-24 PW : 1**

**ಪಾಟೀ ಸವಾಲುಃ ಪ್ರತಿವಾದಿ 6 ನೇ ಪರ ಶ್ರೀ ಪಿ ಹೆಚ್ ಟಿ, ವಕೀಲರಿಂದಃ**

7. ಪ್ರತಿವಾದಿ 1 ರಿಂದ 4 ರವರು 6 ನೇ ಪ್ರತಿವಾದಿಗೆ ದಾವಾ ಆಸ್ತಿಯ ಕ್ರಮಸಂಖ್ಯೆಃ 2 ನ್ನು ಮಾರಾಟ ಮಾಡಿದ್ದು ಗೊತ್ತಿಲ್ಲ. ಯಾವಾಗ ಮಾರಾಟವಾಗಿದೆ ಅಂತಾ ಗೊತ್ತಿಲ್ಲ. ಪ್ರತಿವಾದಿ 1 ರಿಂದ 4 ರವರು ದಿಃ 14.12.2023 ರಂದು ಖರೀದಿ ಪತ್ರ ನೋಂದಣಿಯಾಗಿದ್ದು ದಿಃ 29.12.2023 ರಂದು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ಅದೇ ದಿನ ಅವರು ಕಬ್ಜೆ ಕೊಟ್ಟಿದ್ದಾರೆಂದು ಮಾಹಿತಿ ಇಲ್ಲ. 6 ನೇ ಪ್ರತಿವಾದಿ ವಹಿವಾಟಿಯಲ್ಲಿದ್ದಾರೆ ಅಂದರೆ ಸರಿ. ಖರೀದಿ ಪತ್ರವನ್ನು ನಾವು ಪ್ರಶ್ನೆ ಮಾಡಿಲ್ಲ. ಖರೀದಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಅಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಕೇಸ ಹಾಕಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.